SRI H. D. DEVEGOWDA.—It is a hair splitting argument. ಇದರಲ್ಲಾದರೂ ಕ್ಯಾಟಿಗರಿಕಲ್ ಆಗಿ ಒಂದು ಸ್ಪೇಟ್‌ಮೆಂಟ್ ಮಾಡಿ.

SRI H. M CHANNABASAPPA.—It is not at all our intention to be unhelpful. But you will appreciate the difficulty of the Government. If those who break the law are at an advantage, those who follow the law will be at a disadvantage. Therefore, we will examine the possibility.

PAPERS LAID ON THE TABLE.

SRI H.M. CHANNABASAPPA(Minister for Health).—Madam Speaker I wish to lay on behalf of the Chief Minister Notification No GSR 163 dated 16th June 1977. The Karnataka Prisons (Amendment) Rules, 1977 under section 64 of the Karnataka Prisons Act, 1963.

SRI S. M. YAHYA (Minister for Education).—On behalf of the Minister for Revenue, I beg to lay :

(a) Netification No GSR 102 dated 10th March 1977.
The Karnataka Land Revenue (II Amendment)Rules, 1977.

(b) Notification No GSR 150 dated 7th May 1977.
The Karnataka Land Revenue (Fourth Amendment) Rules 1977.
under section 198 of the Karnataka Land Revenue, Act, 1964.
I beg to lay on the table of the House :

Annual Report of the University of Mysore for the year 1975-76 under section 46(2) of the Karnataka State Universities Act, 1976.

MADAM SPEAKER.—All the papers are laid.

Personal explanation by Sri H. D. Devegowda.

re : remarks in the Legislative Council about the treatment of detenues at the Jail.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸನ್ಮಾನ್ಯ ಅಧ್ಯಕ್ಷೆಣಿಯವರೆ, ತಮ್ಮ ಅನುಮತಿಯನ್ನು ಪಡೆದು ಒಂದು ಮಾತನ್ನು ಹೇಳಬಯಸುತ್ತೇನೆ. ನಿನ್ನೆ ದಿವಸ ವಿದಾನ ಪರಿಷತ್ತಿನಲ್ಲಿ ನಡೆದ ಚರ್ಚೆಯಲ್ಲಿ ಎತ್ತಿದ ರಾಜಕೀಯ ಜೈದಿಗಳ ಬಗ್ಗೆ ದೇವೇಗೌಡರ ಭಿನ್ನಾಭಿಪ್ರಾಯ ಎನ್ನುವ ವಿಷಯದಲ್ಲಿ ನಾನು ಇಷ್ಟು ಮಾತ್ರ ಸ್ಪಷ್ಟೀಕರಣವನ್ನು ನೀಡಬಯಸುತ್ತೇನೆ. ಈ ಸದನದಲ್ಲಿ ಚರ್ಚೆ ನಡೆದಿರುವುದು ತಮಗೂ ಕೂಡ ಗೊತ್ತಿದೆ. ಈ ಸದನದಲ್ಲಿ ಗೃಹ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿದ್ದು ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುತ್ತಿದ್ದಾಗ ನಾನು ಮಧ್ಯೆ ಇಂಟರ್‌ವೀನ್ ಆಗಿ ಈ ಒಂದು ವಿಷಯವನ್ನು ಹೇಳಿದೆ ನಾನು ಹೇಳಿದ ವಿಷಯದ ಬಗ್ಗೆ ಸಾರ್ವಜನಿಕ ಭಿನ್ನಾಭಿಪ್ರಾಯ ಬರುವುದು ಸರಿಯಲ್ಲ. ಆ ಸದನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮಾನ್ ಎ. ಕೆ. ಸುಬ್ಬಯ್ಯನವರು ಒಂದು ಮಾತನ್ನು ಹೇಳಿದ್ದಾರೆ. ನಾನು ಅವರ ಮಾತುಗಳನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಮಾತ್ರ ಹೇಳಿ ಸ್ಪಷ್ಟೀಕರಣ ನೀಡಬಯಸುತ್ತೇನೆ ಈ ಸದನದಲ್ಲೇ ಆಗಲಿ, ಅಥವಾ ಆ ಸದನದಲ್ಲೇ ಆಗಲಿ ಯಾವ ಒಬ್ಬ ರಾಜಕಾರಿಣಿಯೇ ಆಗಲಿ ಅವನು ಯೋಗ್ಯ ರೀತಿಯಿಂದ, ಉತ್ತಮ ರೀತಿಯಿಂದ ಕೆಲಸಮಾಡುತ್ತಿದ್ದಾರೆ ಎಂದರೆ ಅವರ ಮೇಲೆ ನನಗೆ ನಂಬಿಕೆ, ವಿಶ್ವಾಸ, ಅಭಿಮಾನ ಎಲ್ಲಾ ಇರುತ್ತದೆ ನಾನು ಈ ಮಾತನ್ನು ಯಾವ ಸಂದರ್ಭದಲ್ಲಿ ಹೇಳಿದೆ ಎನ್ನುವ ಬಗ್ಗೆ ವಿವರಣೆ ಕೊಡುವುದು ಯುಕ್ತವೆಂದು ತಿಳಿದು ಈಗ ವಿವರಣೆಯನ್ನು ಕೊಡಬಯಸುತ್ತೇನೆ.